# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **927**
ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 14-03-2025
ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಕೃಷಿ ವಿದ್ಯುತ್ ಪಂಪ್ ಸೆಟ್ ಸಬ್ಸಿಡಿ ಫಲಾನುಭವಿಗಳಿದ್ದಾರೆ; ವರ್ಷದಿಂದ ವರ್ಷಕ್ಕೆ ಎಷ್ಟು ವಿದ್ಯುತ್ ಸಂಪರ್ಕಗಳ ಸಂಖ್ಯೆ ಏರಿಕೆಯಾಗುತ್ತಿದೆ; ಸದರಿ ಯೋಜನೆಗೆ ವರ್ಷಕ್ಕೆ ಎಷ್ಟು ವ್ಯಯವಾಗುತ್ತಿದೆ; (ಜಿಲ್ಲಾವಾರು ವಿವರ ನೀಡುವುದು) | 1. ರಾಜ್ಯದಲ್ಲಿನ 10 ಹೆಚ್.ಪಿ ಒಳಗಿನ ಒಟ್ಟು ಕೃಷಿ ವಿದ್ಯುತ್ ಪಂಪ್‌ಸೆಟ್ ಗ್ರಾಹಕರ ಸಂಖ್ಯೆ: 34.33 ಲಕ್ಷ (ಜನವರಿ-2025ರ ಅಂತ್ಯಕ್ಕೆ).<br>2. ವರ್ಷದಿಂದ ವರ್ಷಕ್ಕೆ ಏರಿಕೆಯಾಗಿರುವ ಕೃಷಿ ವಿದ್ಯುತ್ ಪಂಪ್‌ಸೆಟ್ ವಿದ್ಯುತ್ ಸಂಪರ್ಕಗಳು.<br>2022-23 ರ ಸಾಲಿನಲ್ಲಿ 103004 ಸಂಖ್ಯೆ<br>2023-24 ರ ಸಾಲಿನಲ್ಲಿ 73424 ಸಂಖ್ಯೆ<br>2024-25 ರ ಸಾಲಿನಲ್ಲಿ 49987 ಸಂಖ್ಯೆ<br>(ಜನವರಿ-2025ರ ಅಂತ್ಯಕ್ಕೆ)<br>3. 10 ಹೆಚ್.ಪಿ ಒಳಗಿನ ಕೃಷಿ ನೀರಾವರಿ ಪಂಪುಸೆಟ್ ಗ್ರಾಹಕರಿಗೆ ಉಚಿತ ವಿದ್ಯುತ್ ಒದಗಿಸಲು ಸರ್ಕಾರವು 2022-23 ರ ಸಾಲಿನಲ್ಲಿ ಒಟ್ಟು ರೂ.13,381.99 ಕೋಟಿ, 2023-24 ರ ಸಾಲಿನಲ್ಲಿ ಒಟ್ಟು ರೂ.17,301.88 ಕೋಟಿ ಮತ್ತು 2024-25 ಸಾಲಿನಲ್ಲಿ ಒಟ್ಟು 12,785.70 ಕೋಟಿಗಳನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಿರುತ್ತದೆ.<br>4. ಜಿಲ್ಲಾವಾರು ಕೃಷಿ ಪಂಪುಸೆಟ್ಟುಗಳ ವಿವರ ಮತ್ತು ವ್ಯಯವಾಗಿರುವ ಮೊತ್ತದ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ಕೃಷಿ ವಿದ್ಯುತ್ ಪಂಪ್ ಸೆಟ್ ಸಬ್ಸಿಡಿ ಯೋಜನೆಯನ್ನು ಅರ್ಹರಲ್ಲದವರು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸಬ್ಸಿಡಿ ಪಡೆಯಲು ಇರುವ ಮಾನದಂಡಗಳೇನು; | 10 ಹೆಚ್.ಪಿ ವರೆಗಿನ ಎಲ್ಲಾ ಕೃಷಿ ನೀರಾವರಿ ಪಂಪ್ ಸೆಟ್ ಸ್ಥಾವರಗಳ ಗ್ರಾಹಕರು ಮಾತ್ರ ಸಹಾಯಧನದ ಬಿಡುಗಡೆಗೆ ಅರ್ಹರಿರುತ್ತಾರೆ.<br>10 ಹೆಚ್.ಪಿ ಮೇಲ್ಪಟ್ಟು ಮತ್ತು ಅನಧಿಕೃತ 10 ಹೆಚ್.ಪಿವರೆಗಿನ ಕೃಷಿ ನೀರಾವರಿ ಪಂಪ್‌ಸೆಟ್ ಸ್ಥಾವರಗಳು ಸಹಾಯಧನಕ್ಕೆ ಅರ್ಹರಿರುವುದಿಲ್ಲ.<br>ಆದ್ದರಿಂದ, ಅನರ್ಹ ಕೃಷಿ ನೀರಾವರಿ ಪಂಪ್‌ಸೆಟ್ ವಿದ್ಯುತ್ ಸ್ಥಾವರಗಳಿಗೆ ಸಹಾಯಧನ ಬಿಡುಗಡೆಗೊಳಿಸಲಾಗಿರುವುದಿಲ್ಲ. |

<table>
<tr><td>ಇ)</td><td>ಹಾಗಿದ್ದಲ್ಲಿ, ಕೃಷಿ ವಿದ್ಯುತ್ ಪಂಪ್ ಸೆಟ್ ಸಬ್ಸಿಡಿಯನ್ನು ಪರಾಮರ್ಶೆ ಮಾಡುವ ಉದ್ದೇಶ ಇದೆಯೇ; ಪರಾಮರ್ಶೆ ಮಾಡಲು ಕಾರಣಗಳೇನು; ಪರಾಮರ್ಶೆ ನೆಪದಲ್ಲಿ ಅರ್ಹ ಫಲಾನುಭವಿಗಳನ್ನು ಕೈಬಿಡದಂತೆ ಜಾಗ್ರತೆ ವಹಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;</td><td rowspan="2">ಅನರ್ಹ ಕೃಷಿ ನೀರಾವರಿ ಪಂಪ್‌ಸೆಟ್ ವಿದ್ಯುತ್ ಸ್ಥಾವರಗಳಿಗೆ ಸರ್ಕಾರವು ಸಹಾಯಧನ ಬಿಡುಗಡೆಗೊಳಿಸಲಾಗದಿರುವುದರಿಂದ ಕೃಷಿ ವಿದ್ಯುತ್ ಪಂಪ್‌ಸೆಟ್ ಸಬ್ಸಿಡಿಯನ್ನು ಪರಾಮರ್ಶೆ ಮಾಡುವ ಉದ್ದೇಶ ಪ್ರಸ್ತುತ ಇರುವುದಿಲ್ಲ.</td></tr>
<tr><td>ಈ)</td><td>ಪರಾಮರ್ಶೆ ಕಾರ್ಯ ಯಾವ ಹಂತದಲ್ಲಿದೆ; ಅನುಸರಿಸುವ ಮಾನದಂಡಗಳೇನು; ಇದರಿಂದ ಎಷ್ಟು ಮೊತ್ತ ಉಳಿತಾಯವಾಗಲಿದೆ?</td></tr>
</table>

ಸಂಖ್ಯೆ: ಎನರ್ಜಿ 68 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು